KATK900005432025

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು.**

**ಎಸ್.ಸಿ ಸಂಖ್ಯೆ: 10030/2025**

**ಪ್ರಮಾಣೀಕರಿಸಿದ ದಿನಾಂಕಃ 02.07.2026.**

**ಚಾಸಾ.2**

**ಫ್ರಾಸಾ.3**

| | |
|---|---|
| ಹೆಸರು | ಮೊಹಮ್ಮದ್ ಶಬಾಜ್ |
| ತಂದೆಯ ಹೆಸರು | ಶೌಕತ್ ಪಾಶ |
| ವಯಸ್ಸು | 36 ವರ್ಷ |
| ಉದ್ಯೋಗ | ಗಾರೇ ಕೆಲಸ |
| ವಾಸಸ್ಥಳ | ಗಾಂಧೀನಗರ, ತಿಪಟೂರು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ರವರ ಪರಿಚಯವಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ಎಲ್ಲಿಯೂ ನೋಡಿರುವುದಿಲ್ಲ, ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ.

ದಿಃ 06.11.2024 ರಂದು ನಾನು ಸಿದ್ದೀಕ್ ಪಾಶ ರವರಿಗೆ ಹಲ್ಲೆ ಮಾಡಿರುವುದನ್ನು ಕಣ್ಣಾರೆ ನೋಡಿರುವುದಿಲ್ಲ ಹಾಗೂ ನಾನು ಯಾವುದೇ

ಗಲಾಟೆಯನ್ನು ಬಿಡಿಸಿರುವುದಿಲ್ಲ. ನನಗೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ನ್ಯಾಯಾಲಯದ ಮುಂದಿರುವ ಮುದ್ದೆಮಾಲು-1 ರಿಂದ 3 ವಸ್ತುಗಳನ್ನು ಎಲ್ಲಿಯೂ ನೋಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ಒಂದು ಫೋಟೋವನ್ನು ನೋಡಿ ತಾನು ಇರುವುದರ ಬಗ್ಗೆ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಿ.ಪಿ-9 ಎಂದು ಗುರುತಿಸಲಾಯಿತು. ನಾನು ಹೇಳಿಕೆ ನೀಡುವ ಕಾಲಕ್ಕೆ ಪೊಲೀಸರು ಯಾವುದೇ ಆಡಿಯೋ ವಿಡಿಯೋ ಚಿತ್ರೀಕರಣ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 10.11.2024 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ದಿಃ 06.11.2024 ರಂದು ಮಧ್ಯಾಹ್ನ 2.45 ಗಂಟೆಯ ಸಮಯದಲ್ಲಿ ನಾನು ಕೆಲಸದ ನಿಮಿತ್ತ ತಿಪಟೂರು ನಗರ ಮಹಾತ್ಮ ಗಾಂಧೀ ಪಾರ್ಕ್ ಬಳಿ ಹೋಗುತ್ತಿದ್ದಾಗ ನಮ್ಮ ಜನಾಂಗದ ಮುಸ್ತಾಫ ಮತ್ತು ಮೂರು ಜನರು ಪಾರ್ಕಿನ ಒಳಗೆ ಸಿದ್ದೀಕ್ ಮೇಲೆ ಕೂಗಾಡುತ್ತಿದ್ದರು------- ಮಾತನಾಡುತ್ತ ಮಧ್ಯಾಹ್ನ 2.35 ಗಂಟೆಯ ಸಮಯದಲ್ಲಿ ಗಲಾಟೆ ಮಾಡಿ ಹೊಡೆದರು ಎಂದು ತಿಳಿಸಿದನು. ನಂತರ ಸಿದ್ದಿಕ್ ತಿಪಟೂರು ಆಸ್ಪತ್ರೆಕೆ ಹೋದನೆಂದು ನಾನು

ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿ.ಪಿ–10** ಎಂದು ಗುರುತಿಸಲಾಯಿತು.

ನನಗೆ ಸದರಿ ಪ್ರಕರಣದ ಬಗ್ಗೆ ಮಾಹಿತಿ ಇದ್ದು, ನಾನು ಗಲಾಟೆಯನ್ನು ಕಣ್ಣಾರೆ ಕಂಡಿದ್ದು ಹಾಗೂ ಗಲಾಟೆಯನ್ನು ನಾನೇ ಬಿಡಿಸಿ ಸಿದ್ದೀಕ್ ಈತನನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗಲಾಟೆಯ ಸಮಯದಲ್ಲಿ ಮುದ್ದೆಮಾಲು–1 ರಿಂದ 3 ವಸ್ತುಗಳನ್ನು ಹಾಗೂ ಆರೋಪಿತರನ್ನು ನೋಡಿದ್ದರು ಸಹಃ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಘಟನೆಗೆ ಸಂಬಂಧಿಸಿದಂತೆ ದಿಃ 10.11.2024 ರಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆಯುವ ಕಾಲಕ್ಕೆ ನಿ.ಪಿ–9 ರಂತೆ ಫೋಟೋವನ್ನು ತೆಗೆದಿದ್ದು, ಸದರಿ ಹೇಳಿಕೆಯ ಆಡಿಯೋ ವಿಡಿಯೋ ಚಿತ್ರೀಕರಣ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯ ಆಡಿಯೋ–ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ಅನುಮತಿ ಕೋರಿದ್ದು, ಸದರಿ ಆಡಿಯೋ–ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ನ್ಯಾಯಾಲಯದಲ್ಲಿ ಯಾವುದೇ ಸಲಕರಣೆಗಳು ಇಲ್ಲದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

**ಪ್ರಮಾಣೀಕರಿಸಿದ ದಿನಾಂಕಃ 16.07.2026.**

**<u>ಮುಂದುವರೆದ ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

**(ಸರ್ಕಾರಿ ಅಭಿಯೋಜಕರು ಕಡತದೊಂದಿಗೆ ಹಾಜರುಪಡಿಸಿರುವ ಡಿ.ವಿ.ಡಿ ಯನ್ನು ಪ್ಲೇ ಮಾಡಿ ನೋಡಲು ಕೋರಿದ್ದು, ಸದರಿ ಡಿ.ವಿ.ಡಿ ಯನು ಪ್ಲೇ ಮಾಡಲಾಗಿದ್ದು, ಅದರಲ್ಲಿ Video ಎಂಬ ಫೋಲ್ಡರ್ ಇದ್ದು, ಅದರಲ್ಲಿ 23 ಐಟಂಗಳು ಇದ್ದು, ಅದರಲ್ಲಿ 16 ಫೋಟೋಗಳು ಇದ್ದು, 7 ವಿಡಿಯೋಗಳು ಇರುತ್ತದೆ.)**

ಸದರಿ ವಿಡಿಯೋ ನಂ.VID20241110_150036.mp4 ಇದ್ದು ಅದನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಚಾಸಾ–2–ಮೊಹಮ್ಮದ್ ಶಬಾಜ್ ರವರ ಆಡಿಯೋ ವಿಡಿಯೋ ಹೇಳಿಕೆ ಇರುತ್ತದೆ. ಸದರಿ ವಿಡಿಯೋ 2 ನಿಮಿಷ 51 ಸೆಕೆಂಡ್ ಇರುತ್ತದೆ. ಸಾಕ್ಷಿಯು ಸದರಿ ವಿಡಿಯೋವನ್ನು ನೋಡಿ ತಾನು ಇರುವುದಾಗಿ ಗುರುತಿಸಿದ್ದು, ಸದರಿ ವಿಡಿಯೋದಲ್ಲಿ ಕೇಳಿ ಬರುವ ಧ್ವನಿ ನನ್ನದಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಡಿ.ವಿ.ಡಿ ಯನ್ನು ಈಗಾಗಲೇ ನಿ.ಪಿ–12 ಎಂದು ಗುರುತಿಸಲಾಗಿದ್ದು, ಅದರಲ್ಲಿ ಸದರಿ ವಿಡಿಯೋ ನಂ.VID20241110_150036.mp4 ಅನ್ನು ನಿ.ಪಿ–12(ಬಿ) ಎಂದು ಗುರುತಿಸಲಾಯಿತು. ಸದರಿ ತನಿಖಾಧಿಕಾರಿಯ ಮುಂದೆ ನಾನೇ ಸ್ವಇಚ್ಚೆಯಿಂದ ಹೇಳಿಕೆಯನ್ನು ಆಡಿಯೋ ವಿಡಿಯೋ ಮುಖಾಂತರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಡಿಯೋದಲ್ಲಿ ಇರುವ ಧ್ವನಿ ನನ್ನದೇ ಇದ್ದರು ಸಹಃ ನನ್ನದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಹಾಗೂ ಬರೆಯಲು ಬರುವುದಿಲ್ಲ ಎಂದರೆ ಸರಿ.

<u>(ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ. ಬಿ.ಜಿ.ಕೆ ಹಾಗೂ ಶ್ರೀ ಬಿ.ಎಸ್ ವಕೀಲರುಗಳು ಹಾಜರಿದ್ದು, ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.)</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.

(ಹೇಮಂತ್ ಕುಮಾರ್ ಸಿ.ಆರ್)
5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತಿಪಟೂರು